**OS No. 34/2016**
**ಡಿ.ಡಬ್ಲ್ಯೂ: 1**

**ದಿನಾಂಕ 03-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

-

**<u>ಪಾಟೀ ಸವಾಲು ವಾದಿಯ ಪರ: ಶ್ರೀ. ಎಮ್. ವಿ. ಕೆ. ವಕೀಲರಿಂದಃ</u>**

1. ಪ್ರತಿವಾದಿ ನಂಬರ 1 ರವರು ನನ್ನ ತಂದೆ. ನನ್ನ ತಂದೆಗೆ 7 ಜನ ಅಣ್ಣ-ತಮ್ಮಂದಿರು. ನಮ್ಮ ತಂದೆಯ ಅಣ್ಣ-ತಮ್ಮಂದಿರು ಎಲ್ಲರೂ ಒಟ್ಟಿಗೆ ಇದ್ದಾರೆ.p

2. ನನ್ನ ತಂದೆಗೆ 3 ಜನ ಹೆಂಡತಿಯರು. ಮೊದಲನೆ ಹೆಂಡತಿಯ ಹೆಸರು ಸಾಯಿದಾ ಬೇಗಂ ಇವಳಿಗೆ 8 ಜನ ಮಕ್ಕಳು. ಪ್ರತಿವರಾಟದಿ ನಂಬರ 2, 3, 6 ರಿಂದ 9, 12, 13 ರವರು ಸಾಯಿದಾ ಬೇಗಂ ಮಕ್ಕಳು. ಎರಡನೆ ಹೆಂಡತಿಯ ಹೆಸರು ಅಬುದಾ ಬೇಗಂ ಇವರಿಗೆ ಇಬ್ಬರು ಮಕ್ಕಳು. ಪ್ರತಿವಾದಿ ನಂಬರ 4 ಮತ್ತು 5 ರವರು ಅವರ ಮಕ್ಕಳು. ಮೂರನೆ ಹೆಂಡತಿಯ ಹೆಸರು ರುಖಿಯಾ ಬೇಗಂ. ಪ್ರತಿವಾದಿ ನಂಬರ 10 ಮತ್ತು 11 ಇವರ ಮಕ್ಕಳು.

3. ದಾವಾ ಆಸ್ತಿ ನಂಬರ 226 ಒಟ್ಟು ಕ್ಷೇತ್ರ 12 ಎಕರೆ 2 ಗುಂಟೆ ಇದೆ. ಖರೀದಿ ಪತ್ರಗಳು ಯಾರ-ಯಾರ ಹೆಸನಲ್ಲಿ ಇವೆ ಎಂದರೆ ಸಾಕ್ಷಿಯು ಪ್ರತಿವಾದಿ ನಂಬರ 1 ರವರ ಹೆಸರಿನಲ್ಲಿ 3 ಎಕರೆ 1 ಗುಂಟೆ, ಅಬುದಾ ಬೇಗಂ ಇವರ ಹೆಸರಿನಲ್ಲಿ 3 ಎಕರೆ 1 ಗುಂಟೆ, ಪ್ರತಿವಾದಿ ನಂಬರ 12 ರವರ ಹೆಸರಿನಲ್ಲಿ 3 ಎಕರೆ, ಪ್ರತಿವಾದಿ ನಂಬರ 13 ರವರ ಹೆಸರಲ್ಲಿ 3 ಎಕರೆ ಜಮೀನು ಇದೆ. ಇವರ ಹೆಸರಿನಲ್ಲಿ ಖರೀದಿ ಪತ್ರವು ಯಾವಾಗ ಆಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿ ನಂಬರ 1 ರವರ ಹೆಸರಿನಲ್ಲಿ ದಿನಾಂಕಃ 31-03-1997, ಅಬುದಾ ಬೇಗಂ ಇವರ ಹೆಸರಿನಲ್ಲಿ ದಿನಾಂಕಃ 31-03-1997, ಪ್ರತಿವಾದಿ ನಂಬರ 12 ರವರ ಹೆಸರಿನಲ್ಲಿ ಸನಃ 1999 ರಂದು ಆಗಿರುತ್ತದೆ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಪ್ರತಿವಾದಿ ನಂಬರ 13 ಸನಃ 1999 ರಂದು ಆಗಿರುತ್ತದೆ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ದಾಖಲಾತಿ ನಂಬರ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ ನಂಬರ 1 ರವರು ಖರೀದಿ ಮಾಡಿದ ಜಮೀನಿನ ಚಕಬಂದಿ ಪೂರ್ವಕ್ಕೆ ರೈಲ್ಲೆ ಹಳಿ, ಪಶ್ಚಿಮಕ್ಕೆ ಜಮೀನು ಸರ್ವೆ ನಂಬರ 222, ಉತ್ತರಕ್ಕೆ ಪಾಲಿಟಸಿಕ್ನಿಕ್ ಕಾಲೇಜ. ದಕ್ಷಿಣಕ್ಕೆ ಸಾಬಣ್ಣ ಇವರ ಜಮೀನು. ಅಬಿದಾಬೇಗಂ ಇವರು ಖರೀದಿ ಮಾಡಿದ ಜಮಿನಿನ ಚಕಬಂದಿ ಪೂರ್ವಕ್ಕೆ ರೈಲ್ವೆ ಹಳಿ, ಪಶ್ಚಿಮಕ್ಕೆ ಜಮೀನು ಸರ್ವೆ 222, ಉತ್ತರಕ್ಕೆ ಜಮೀನು ಸರ್ವೆ ನಂಬರ 226, ದಕ್ಷಿಣಕ್ಕೆ ಸಣ್ಣ ಸಾಬಣ್ಣ ಇವರ ಜಮೀನು. ಪ್ರತಿವಾದಿ ನಂಬರ 12 ರವರು ಖರೀದಿ ಮಾಡಿದ ಜಮಿನಿನ ಚಕಬಂದಿ ಪೂರ್ವಕ್ಕೆ ರೈಲ್ವೆ

ಹಳಿ, ಪಶ್ಚಿಮಕ್ಕೆ ಜಮೀನು ಸರ್ವೆ ನಂಬರ 222, ಉತ್ತರಕ್ಕೆ ಪಾಲಿಟೆಕ್ನಿಕ್ ಕಾಲೇಜ, ದಕ್ಷಿಣಕ್ಕೆ ಸಣ್ಣ ಸಾಬಣ್ಣ ಇವರ ಜಮೀನು. ನಾನು ಖರೀದಿ ಮಾಡಿದ ಜಮೀನಿನ ಚಕಬಂದಿ ಪೂರ್ವಕ್ಕೆ ರೈಲ್ವೆ ಹಳಿ, ಪಶ್ಚಿಮಕ್ಕೆ ಜಮೀನು ಸರ್ವೆ  ನಂಬರ 222, ಉತ್ತರಕ್ಕೆ ಪಾಲಿಟೆಕ್ನಿಕ್ ಕಾಲೇಜ, ದಕ್ಷಿಣಕ್ಕೆ ಸಣ್ಣ ಸಾಬಣ್ಣ ಇವರ ಜಮೀನು ಇದೆ.

**ವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**